ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೊಡಗು ಮಡಿಕೇರಿ

ಸಿಸಿ ನಂಬರ್‌ಃ178/2023

ಪಿಡಬ್ಲ್ಯೂಃ1

| | | |
|---|---|---|
| ಸಾಕ್ಷಿದಾರರ ಹೆಸರು | - | ಎಸ್.ಎಸ್. ಶಿವಾನಂದ |
| ತಂದೆಯ ಹೆಸರು | - | ಸಿದ್ದರಾಮಯ್ಯ |
| ಪ್ರಾಯ | - | 53 ವರ್ಷ |
| ಉದ್ಯೋಗ | - | ಎ.ಎಸ್.ಐ |
| ವಾಸಸ್ಥಳ | - | ಮಡಿಕೇರಿ |

**ದಿಃ06.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು. ದಂಡ ಪ್ರಕ್ರಿಯಾ ಸಂಹಿತೆಯ ಕಲಂ 299 ರ ಅಡಿಯಲ್ಲಿ**

**ಮುಖ್ಯ ವಿಚಾರಣೆಃ ಮಾನ್ಯ ಹಿಸಸಅಭಿಯೋಜಕರವರಿಂದಃ** ನಾನು ಕಳೆದ ಮೂರು ವರ್ಷಗಳಿಂದ ಎ.ಎಸ್.ಐ ಆಗಿ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ಆದೇಶದ ಮೇರೆಗೆ ದಿಃ 01.04.2024 ರಂದು ನಾನು ಮೈಸೂರು ಮಹಾನಗರ ಟೇರಿಶನ್ ಕಾಲೇಜಿನ ಹಿಂಭಾದಲ್ಲಿ ಇರುವ ಬಸ್ಸು ತಂಗುದಾಣದ ಮುಂದೆ ತೆರಳಿ ಪಂಚರನ್ನು ಬರಮಾಡಿಕೊಂಡು ಪಂಚರ ಸಮಕ್ಷಮ ಆರೋಪಿಯ ವಿರುದ್ಧ ನ್ಯಾಯಾಲಯದಿಂದ ಹೊರಡಿಸಿದಂತಹ ಉದ್ಘೋಷಣಾ ಆದೇಶದ ಬಗ್ಗೆ ಪಂಚರಿಗೆ ತಿಳಿಸಿ ಸದರಿ ಉದ್ಘೋಷಣಾ ಪ್ರತಿಯನ್ನು ಬಸ್ಸು ತಂಗುದಾಣದ ಕಬ್ಬಕ್ಕೆ ಅಂಟಿಸಿರುತ್ತೇನೆ. ನಂತರದಲ್ಲಿ ಸದರಿ ಸ್ಥಳೀಯರನ್ನು ಆರೋಪಿಯ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ನಂತರದಲ್ಲಿ ಬೆಳಗ್ಗೆ 10.00 ರಿಂದ 10.30 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇನೆ ಹಾಗೂ ನಾನೂ ಕೂಡಾ ಸಹಿ ಮಾಡಿರುತ್ತೇನೆ. ಉದ್ಘೋಷಣಾ ಆದೇಶ ನೋಟೀಸ್ ನಿಪಿ-1 ಎಂದು ಮಹಜರ್ ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ ಆರೋಪಿಯ ವಿರುದ್ಧ ಜಪ್ತಿ ವಾರಂಟ್ ಪಡೆದುಕೊಂಡಿರುತ್ತೇನೆ. ಸದರಿ ವಾರಂಟಿನ ಪ್ರಕಾರ ಮೈಸೂರು ನಗರ ಪಾಲಿಕೆಯಲ್ಲಿ ಆರೋಪಿಯ ಹೆಸರಿನಲ್ಲಿ ಚರ ಮತ್ತು ಸ್ಥಿರ ಆಸ್ತಿ ಇರುವುದರ ಬಗ್ಗೆ ಮಾಹಿತಿಯನ್ನು ಕೇಳಿರುತ್ತೇನೆ. ಆರೋಪಿ ಸಿದ್ಧಾರ್ಥ ನಗರದ ಬಳಿ ವಾಸ ಇರುವುದಿಲ್ಲ ಮತ್ತು ಆತನ ಹೆಸರಿನಲ್ಲಿ ಯಾವುದೇ ಚರ ಮತ್ತು ಸ್ಥಿರ ಆಸ್ತಿ ಇರುವುದಿಲ್ಲ ಎಂದು ದೃಢೀಕರಣ ಪತ್ರವನ್ನು ನೀಡಿರುತ್ತಾರೆ. ಸದರಿ ದೃಢೀಕರಣ ಪತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್. ಬಿ. ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.